## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉಪ ವಿಭಾಗಾಧಿಕಾರಿಗಳ(KLLAD) ವೈಯಕ್ತಿಕ ಠೇವಣಿ ಖಾತೆಗಳನ್ನು 2021-22 ನೇ ಸಾಲಿಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ 41 ಟಿಎಆರ್ 2019 ದಿನಾಂಕ:19.12.2019.

2) ಸಹಾಯಕ ಆಯುಕ್ತರ ಕಾರ್ಯಾಲಯ, ಮಂಗಳೂರು ಉಪ ವಿಭಾಗ ಇವರ ಪತ್ರ ಸಂ:ACMNG- LADS/ 2/ 2020/E-135373, ದಿ:16.04.2021.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಹೆಸರಿನಲ್ಲಿರುವ KLLAD ಯೋಜನೆಗೆ ಸಂಬಂಧ ಪಿ.ಡಿ. ಖಾತೆಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ 286 ಎ ಪ್ರಕಾರ ಪ್ರತಿ ಆರ್ಥಿಕ ಸಾಲಿನ ಅಂತ್ಯದಲ್ಲಿ ಮುಕ್ತಾಯಗೊಳಿಸಿ ಮುಂದಿನ ಆರ್ಥಿಕ ಸಾಲಿನಲ್ಲಿ ಮುಂದುವರೆಸಲು ಇಚ್ಚಿಸಿದಲ್ಲಿ ಇಲಾಖೆಯ ನಗದು ಪುಸ್ತಕದ ಶಿಲ್ಕಿಗೂ ಹಾಗೂ ಖಜಾನೆ ಖಾತೆಯ ಶಿಲ್ಕಿಗೂ ಲೆಕ್ಕ ಹೊಂದಾಣಿಕೆ ಮಾಡಿ ದೃಢೀಕರಿಸಿದ ನಂತರ ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ಸಂಬಂಧಪಟ್ಟ ಯೋಜನಾ ಇಲಾಖೆಯ ಮುಖಾಂತರ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಸಹಾಯಕ ಆಯುಕ್ತರು ಮಂಗಳೂರು ಉಪ ವಿಭಾಗ ಇವರು KLLAD ಯೋಜನೆಗೆ ಸಂಬಂಧ ಬಿಡುಗಡೆಯಾಗುವ ಅನುದಾನವನ್ನು ಬಳಸಲು ಪಿ.ಡಿ. ಖಾತೆಯನ್ನು ಮುಂದುವರೆಸಲು ಕೋರಿರುತ್ತಾರೆ ಪಿ.ಡಿ. ಖಾತೆ ಮುಂದುವರಿಸಲು ಅಗತ್ಯವಿರುವ ಖಜಾನೆ ಶಿಲ್ಕು, ಲೆಕ್ಕಹೊಂದಾಣಿಕೆ ದೃಢೀಕರಣ ಮುಂತಾದ ಮಾಹಿತಿಗಳನ್ನು ಒದಗಿಸಲು ಕಾಲಾವಕಾಶ ಬೇಕಾಗಿರುವುದರಿಂದ ಎಲ್ಲಾ ಉಪ ವಿಭಾಗಾಧಿಕಾರಿಗಳ ಪಿ.ಡಿ. ಖಾತೆಗಳನ್ನು ೩ ತಿಂಗಳವರೆಗೆ ಮುಂದುವರಿಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ ಆಇ 17 ಟಿಎಆರ್ 2021, ಬೆಂಗಳೂರು, ದಿನಾಂಕ:11/05/2021

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ರಾಜ್ಯದ ಎಲಾ ಉಪ ವಿಭಾಗಾಧಿಕಾರಿಗಳ ಹೆಸರಿನಲ್ಲಿರುವ KLLAD ಯೋಜನೆಯ ವೈಯಕ್ತಿಕ ಠೇವಣಿ ಖಾತೆಗಳನ್ನು ದಿನಾಂಕ:01.04.2021 ರಿಂದ ದಿನಾಂಕ:30.06.2021 ರವರೆಗೆ 2021-22 ನೇ ಸಾಲಿನಲ್ಲಿ ಮುಂದುವರೆಸಲು ಅನುಮತಿ ನೀಡಲಾಗಿದೆ. ದಿನಾಂಕ:01.07.2021 ರಿಂದ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಂದುವರೆಸಲು ಈ ಕೆಳಗಿನ ಮಾಹಿತಿಗಳನ್ನು ಉಪ ವಿಭಾಗಾಧಿಕಾರಿಗಳು ಒದಗಿಸಬೇಕಾಗುತ್ತದೆ.

1. ದಿನಾಂಕ:31.03.2021 ರ ಅಂತ್ಯಕ್ಕೆ KLLAD ಸಂಬಂಧ ಪಿ.ಡಿ. ಖಾತೆಯಲ್ಲಿ ಇರುವ ಶಿಲ್ಕಿನ ವಿವರಗಳನ್ನು ನಗದು ಪುಸ್ತಕದ ಪ್ರಕಾರ ನೀಡುವುದು.
2. ದಿನಾಂಕ:31.03.2021 ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿನ ಪಟ್ಟಿ ಒದಗಿಸುವುದು.
3. ದಿನಾಂಕ:31.03.2021 ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿಗೂ ಹಾಗೂ ನಗದು ಶಿಲ್ಕಿಗೂ ಲೆಕ್ಕ ಹೊಂದಾಣಿಕೆಯನ್ನು ಮಾಡಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿ ಪ್ರಸ್ತಾವನೆ ಸಲ್ಲಿಸುವುದು.
4. ಸರ್ಕಾರದ ಆದೇಶ ಸಂ:ಆಇ 41 ಟಿಎಆರ್ 2019, ದಿ:19.12.2019 ರ ಆದೇಶದನ್ವಯ ಹಿಂದಿನ ವರ್ಷಗಳ ಬದ್ಧವಲ್ಲದ ಕಾಮಗಾರಿಗಳಿಗೆ (Uncommitted Works) ಸಂಬಂಧಿಸಿದ, KLLAD ನಿಯಮಗಳ ಪ್ರಕಾರ ಈಗ ಬಳಸಲು ಸಾಧ್ಯವಿಲ್ಲದ ಶಿಲ್ಕುಗಳನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡಿದ ಬಗ್ಗೆ ವರದಿ ನೀಡುವುದು.

ಮೇಲಿನ ವಿವರಗಳನು ಒಳಗೊಂಡ ಪ್ರಸ್ತಾವನೆಗಳನ್ನು ದಿನಾಂಕ:31.05.2021 ರ ಒಳಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಹಾಗೂ ಈ ಮಾಹಿತಿಯನು ನೀಡದೇ ಇದ್ದಲ್ಲಿ ಉಪ ವಿಭಾಗಾಧಿಕಾರಿಗಳ(KLLAD) ಪಿ.ಡಿ. ಖಾತೆಯನ್ನು ದಿನಾಂಕ:01.07.2021 ರಿಂದ ಸ್ಥಗಿತಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

Signed by Shobha Ha
Date: 11-03-2021 16:31:01
Reason: Approved

(ಹೆಚ್.ಎ.ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
(ಆನಿ ಮತ್ತು ಬಿಸಿಸಿ)

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಎ)/ (ಜಿ.ಎಸ್.ಎಸ್.ಎ), ಕರ್ನಾಟಕ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ/ಲೆಕ್ಕ ಶಾಖೆ) ಕರ್ನಾಟಕ, ಬೆಂಗಳೂರು-1.
3. ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್,ಗ್ರಿನ್ ಕಟ್ಟಡ, ಔಷದ ನಿಯಂತ್ರಣ ಅವರಣ. ಬೆಂಗಳೂರು-560 001.
5. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು/ತಾಲ್ಲೂಕ್ ಉಪ ಖಜಾನೆಗಳು.
7. ಹೆಚ್ಚುವರಿ ಪ್ರತಿಗಳು / ಶಾಖಾರಕ್ಷಾ ಕಡತ.